**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.33/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಂಜುನಾಥ ಆರ್. |
| ತಂದೆಯ ಹೆಸರು | : | ರುದ್ರಪ್ಪ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಪಿ.ಸಿ. 410, RMC Yard ಪೊಲೀಸ್ ಠಾಣೆ, ದಾವಣಗೆರೆ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 11

ಸಿ.ಡಬ್ಲ್ಯೂ 13

ದಿ: 18-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ನಾನು 2017 ರಿಂದ 2023 ರವರೆಗೆ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪಿ.ಸಿ. ಆಗಿ ಕಾರ್ಯನಿರ್ವಹಿಸುತ್ತಿದ್ದೆ. ದಿಃ 21-09-2022 ರಂದು ಈ ಪ್ರಕರಣದಲ್ಲಿ ತನಿಖಾಧಿಕಾರಿಗಳಾದ ಚಾಸಾ-16 ರವರು ಪಂಚನಾಮೆಯ ಮಾಡುವ ಕಾಲಕ್ಕೆ ಪೋಟೋವನ್ನು ತೆಗೆಯಲು ಹೇಳಿದ್ದರು. ಅದರಂತೆ ನಾನು ಪೋಟೋವನ್ನು ತೆಗೆದಿದ್ದೇನೆ. ದಿಃ 22-09-2022 ರಂದು ಸ್ಥಳ ಪಂಚನಾಮೆ ಮಾಡುವ ಕಾಲಕ್ಕೆ ಪೋಟೋವನ್ನು ತೆಗೆಯಲು ಹೇಳಿದ್ದರು. ಅದರಂತೆ ನಾನು ಪೋಟೋವನ್ನು ತೆಗೆದಿದ್ದೇನೆ. ನಂತರ ಠಾಣೆಯಿಂದ ನೀಡಿದ ಲ್ಯೂಮಿಕ್ಸ ಕ್ಯಾಮರಾವನ್ನು ತೆಗೆದುಕೊಂಡು ರಾಘವೇಂದ್ರ ಕಲರ್ ಲ್ಯಾಬ್ ಗೆ ಹೋಗಿ USB cable ಮೂಲಕ transfer ಮಾಡಿಕೊಂಡು ಎರಡು ಕಲರ್ ಪ್ರಿಂಟ್ ನ್ನು ತೆಗೆದಿದ್ದೇನೆ. ಅದನ್ನು ಯಥವತ್ತಾಗಿ ಸಿಡಿಗೆ copy ಮಾಡಿದ್ದೇನೆ. ನಂತರ ಅದೇ ದಿನ ಸಂಜೆ ಪೋಟೋ ಮತ್ತು ಸಿಡಿಯನ್ನು

ಹಾಗೂ 65B ಪ್ರಮಾಣ ಪತ್ರವನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ನಾನು ತೆಗೆದಂತಹ ಪೋಟೋಗಳನ್ನು ಈಗ ನೋಡಿ ಗುರುತಿಸುತ್ತೇನೆ. ಆ ಪೋಟೋಗಳನ್ನು ಈಗಾಗಲೇ ನಿಪಿ-3, 4 ಮತ್ತು 8 ಗುರುತಿಸಲಾಗಿದೆ. ನಾನು ಹಾಜರುಪಡಿಸಿರುವಂತಹ ಸಿಡಿಯನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ಸಿಡಿಯನ್ನು ನಿಪಿ-15 ಅಂತ, ಸಾಕ್ಷಿಯ ಸಹಿಯನ್ನು ನಿಪಿ-15(ಎ) ಅಂತ ಗುರುತಿಸಲಾಯಿತು. 65B ಪ್ರಮಾಣ ಪತ್ರವನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. 65B ಪ್ರಮಾಣ ಪತ್ರವನ್ನು ನಿಪಿ-16 ಅಂತ, ಸಾಕ್ಷಿಯ ಸಹಿಯನ್ನು ನಿಪಿ-16(ಎ) ಅಂತ ಗುರುತಿಸಲಾಯಿತು.

2. ದಿಃ 01-10-2022 ರಂದು ಚಾಸಾ-16 ರವರು ನನಗೆ ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ವಸ್ತುಗಳನ್ನು ಭಾತಿ, RFSL ಗೆ ಕೊಟ್ಟು ಬರಲು ಹೇಳಿರುವುದರಿಂದ ನಾನು ಪಾಸಪೋರ್ಟ,ವಸ್ತುಗಳನ್ನು ಮತ್ತು ದಾಖಲೆಗಳನ್ನು ತೆಗೆದುಕೊಂಡು ಹೋಗಿ ಭಾತಿ, RFSL ಗೆ ಕೊಟ್ಟು ಸ್ವೀಕೃತಿಯನ್ನು ಪಡೆದುಕೊಂಡು ಬಂದು ತನಿಖಾಧಿಕಾರಿಗಳು ಕೊಟ್ಟಿರುತ್ತೇನೆ. ಆ ಸ್ವೀಕೃತಿಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-14 ಅಂತ ಗುರುತಿಸಲಾಗಿದೆ. ನನಗೆ ನೀಡಿದ ಪಾಸಪೋರ್ಟನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-17 ಅಂತ ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್.ಜೆ.ಕೆ., ವಕೀಲರಿಂದ ಆರೋಪಿತರ ಪರವಾಗಿ**:

3. ಈಗ ನನಗೆ ತೋರಿಸಿದ ನಿಪಿ-3, 4 ಮತ್ತು 8 ರಲ್ಲಿ ಯಾವ ಜಾಗ/Location ಕಂಡು ಬರುತ್ತಿಲ್ಲ ಅಂದರೆ ನಿಜ. ನಾನು ಸಿಡಿಗೆ transfer ಮಾಡಿದ್ದೇನೆ ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-3, 4 ಮತ್ತು 8 ರ ಪೋಟೋಗಳನ್ನು ಎಲ್ಲೋ ತೆಗೆದು ಅವುಗಳನ್ನು edit ಮಾಡಲಾಗಿದೆ ಅಂದರೆ ಸರಿಯಲ್ಲ. ನಿಪಿ-8 ರಲ್ಲಿ ಗಣೇಶ ಪ್ರತಿಷ್ಠಾಪಣೆ ಮತ್ತು ಹೈಸ್ಕೂಲ್ ಮೈದಾನ ಕಾಣುತ್ತಿಲ್ಲ ಅಂದರೆ ನಿಜ. ಈಗ ನನಗೆ ತೋರಿಸಿದ ನಿಪಿ-8 ರಲ್ಲಿ ಗಾಡಿಯ ಪಕ್ಕ ಒಂದು ಪರದೆ ಕಾಣುತ್ತದೆ ಅಂದರೆ ನಿಜ. ಅಮಾನತ್ತು ಪಂಚನಾಮೆ ಮಾಡುವ ಕಾಲಕ್ಕೆ ತೆಗೆದ ಪೋಟೋ ನಿಪಿ-8 ಇರುವುದಿಲ್ಲ ಅಂದರೆ ಸುಳ್ಳು.

ಕಲರ್ ಪ್ರಿಂಟ್ ನ್ನು ತೆಗೆಯಲು ನಾನು ಬೇರೆ ಪರವನಾಗಿ ಪಡೆದುಕೊಂಡಿಲ್ಲ. ಪಾಸಪೋರ್ಟನ್ನು ಪಡೆದು FSL ಗೆ ಹೋಗಿ ಮದ್ದೆ ಮಾಲುಗಳನ್ನು ಕೊಟ್ಟು ನಾನು ಸ್ವೀಕೃತಿಯನ್ನು RFSL ಇಲಾಖೆಯಿಂದ ಪಡೆದುಕೊಂಡಿದ್ದೇನೆ ಅಂದರೆ ಸರಿಯಲ್ಲ. ಪಂಚನಾಮೆಯ ಕಾಲಕ್ಕೆ ಪೋಟೋಗಳನ್ನು ತೆಗೆದಿಲ್ಲ ಅಂದರೆ ಸುಳ್ಳು.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.